ಕಾರಾಗೃಹ ಸ್ಥಳಾಂತರ

253(3645); ಶ್ರೀ ತನ್ವೀರ್ ಸೇಠ್

ಅ) ಮೈಸೂರು ಜಿಲ್ಲಾ ಕಾರಾಗೃಹವು ಮೈಸೂರು ನಗರದ ಒಳಭಾಗದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮೈಸೂರು ಜಿಲ್ಲಾ ಕಾರಾಗೃಹವನ್ನು ನಗರದ ಹೊರಭಾಗಕ್ಕೆ ಸ್ಥಳಾಂತರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; (ವಿವರ ನೀಡುವುದು)?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಹೌದು.

ಆ) ಮೈಸೂರು ಕೇಂದ್ರ ಕಾರಾಗೃಹವು 1862ರಲ್ಲಿ ನಿರ್ಮಿಸಲಾಗಿದ್ದು, ಸದರಿ ಕಾರಾಗೃಹದಲ್ಲಿ 506 ಬಂದಿಗಳಿಗೆ ಸ್ಥಳಾವಕಾಶ ಇರುವಂತೆ ನಿರ್ಮಿಸಲಾಗಿದೆ. ಹಾಲಿ ಈ ಕಾರಾಗೃಹದಲ್ಲಿ ಶಿಕ್ಷೆಗೆ ಒಳಪಟ್ಟ ಖೈದಿಗಳನ್ನು ಮತ್ತು ವಿಚಾರಣಾ ಖೈದಿಗಳನ್ನು ಒಟ್ಟಿಗೆ ಇಡಲಾಗಿದೆ. ಸದರಿ ಕಾರಾಗೃಹದಲ್ಲಿ ಹಾಲಿ 1308 ಬಂದಿಗಳು ವಾಸವಿದ್ದು, ಇದರಿಂದಾಗಿ ಖೈದಿಗಳಿಗೆ ಹಾಗೂ ಆಡಳಿತಕ್ಕೂ ತುಂಬಾ ತೊಂದರೆಯಾಗಿರುತ್ತದೆ.

ಮೈಸೂರು ಕೇಂದ್ರ ಕಾರಾಗೃಹವನ್ನು ನಗರದ ಹೊರ ವಲಯಕ್ಕೆ ಸ್ಥಳಾಂತರಿಸಿ ನೂತನ ಕೇಂದ್ರ ಕಾರಾಗೃಹವನ್ನು ನಿರ್ಮಿಸಲು ಅವಶ್ಯಕವಿರುವ 100 ಎಕರೆಯಷ್ಟು ಸರ್ಕಾರಿ ಜಮೀನು ಮಂಜೂರು ಮಾಡುವಂತೆ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆರವರಲ್ಲಿ ಕೋರಲಾಗಿದ್ದು ಸೂಕ್ತ ಸರ್ಕಾರಿ ಜಮೀನು ಕಂದಾಯ ಇಲಾಖೆಯಿಂದ ಮಂಜೂರು ಆದ ನಂತರ ನೂತನ ಕೇಂದ್ರ ಕಾರಾಗೃಹವನ್ನು ನಿರ್ಮಿಸಿ ಶಿಕ್ಷಾ ಬಂದಿಗಳನ್ನು ಅಲ್ಲಿಗೆ ಸ್ಥಳಾಂತರಿಸಲು ಯೋಜಿಸಲಾಗಿದೆ.

ಹಾಗೂ ಹಳೇ ಕಾರಾಗೃಹವನ್ನು ವಿಚಾರಣಾಧೀನ ಖೈದಿಗಳಿಗಾಗಿ ಉಪಯೋಗಿಸಲಾಗುವುದು.

ತಡೆಹಿಡಿಯಲಾದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಮಹಾಮಸ್ತಕಾಭಿಷೇಕ

193(2529); ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ)

ಅ) 2015ನೇ ಸಾಲಿನಲ್ಲಿ ಕಾರ್ಕಳದ ಇತಿಹಾಸ ಪ್ರಸಿದ್ಧ ಭ॥ ಬಾಹುಬಲಿ ಮೂರ್ತಿಗೆ ಮಹಾಮಸ್ತಕಾಭಿಷೇಕ ನೆರವೇರಲಿದ್ದು, ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ದೇಶ–ವಿದೇಶಗಳ ಭಕ್ತಾದಿಗಳು/ಪ್ರವಾಸಿಗರು ಪಾಲ್ಗೊಳ್ಳಲಿರುವುದರಿಂದ ಈ ಸಂದರ್ಭವನ್ನು ಆಕರ್ಷಿತಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳು / ಯೋಜನೆಗಳು ಯಾವುವು;

ಆ) ಈ ಸಂಬಂಧ ಚರ್ಚೆ ನಡೆಸುವ ಪೂರ್ವದಲ್ಲಿ ಉದ್ದೇಶಿತ ಕಾರ್ಯಕ್ರಮಗಳ ಕರಡು ತಯಾರಿಸಲಾಗಿದೆಯೇ;

ಇ) ಉದ್ದೇಶಿತ ಸಭೆಗೆ ಸಲಹೆಗಳನ್ನು ಪಡೆಯಲು ಎಲ್ಲಾ ಸ್ಥಳೀಯ ಸಂಸ್ಥೆಗಳನ್ನು ಹಾಗೂ ಸರ್ಕಾರಿ ಇಲಾಖೆಗಳನ್ನು ಒಳಪಡಿಸಲಾಗಿದೆಯೇ;

ಶ್ರೀ ಸಿದ್ದರಾಮಯ್ಯ (ಸನ್ಮಾನ್ಯ ಮುಖ್ಯಮಂತ್ರಿಗಳು)

ಅ) 2015ನೇ ಸಾಲಿನಲ್ಲಿ ಕಾರ್ಕಳದ ಇತಿಹಾಸ ಪ್ರಸಿದ್ಧ ಬಾಹುಬಲಿ ಮೂರ್ತಿಗೆ ಮಹಾಮಸ್ತಕಾಭಿಷೇಕ ನೆರವೇರಲಿದ್ದು, ದೇಶ–ವಿದೇಶಗಳ ಭಕ್ತಾಧಿಗಳು / ಪ್ರವಾಸಿಗರು, ಪಾಲ್ಗೊಳ್ಳಲಿರುವುದರಿಂದ ಈ ಸಂದರ್ಭದಲ್ಲಿ ಆಕರ್ಷಿತಗೊಳಿಸಲು ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ಅಧ್ಯಕ್ಷತೆಯ ಜಿಲ್ಲಾ ಪ್ರವಾಸೋದ್ಯಮ ಸಮಿತಿಯಿಂದ (ಪ್ರವಾಸೋದ್ಯಮ ಇಲಾಖೆಯಿಂದ) ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಒಟ್ಟು ₹ 300.00 ಲಕ್ಷ ಅಂದಾಜು ಮೊತ್ತದಲ್ಲಿ